ಶ್ರೀ ಬಿ. ರಾಚಯ್ಯ.—೧೯೫೬ನೇ ಇಸವಿಗಿಂತ ಹಿಂದೆ ಯಾರು ಇದ್ದರೋ ಅವರಿಗೆ ಪುನರ್ವಿಮರ್ಶಿತ ಶ್ರೇಣಿಯಲ್ಲಿ ಸಂಬಳ ಕೊಡತಕ್ಕಂಥದ್ದನ್ನು ಅನುಸರಿಸಿರುತ್ತೇವೆ. ಇದರಲ್ಲಿ ಎರಡು ಶ್ರೇಣಿಗಳು ಇದ್ದು ಒಂದು ಹೈದರಾಬಾದ್ ಕರ್ನಾಟಕದಲ್ಲಿ ಶಿಕ್ಷಕರಾಗಿದ್ದವರಿಗೆ ೧೯೫೬-೬೧ರಲ್ಲಿ ಏನು ಒಂದು ಸಂಬಳವನ್ನು ಪುನರ್ ವಿಮರ್ಶೆ ಮಾಡಿದೆವೋ, ಆ ಸಂಬಳಕ್ಕಿಂತ ಹೆಚ್ಚು ಇದ್ದುದರಿಂದ ಅವರು ಗಳು ತೆಗೆದುಕೊಳ್ಳಲಿಲ್ಲ. ಎರಡನೆಯ ದರ್ಜೆ ಶಿಕ್ಷಕರು ಯಾರು ಇದ್ದಾರೋ ಅವರಿಗೆ ಪುನರ್ ವಿಮರ್ಶಿತ ಶ್ರೇಣಿಯಲ್ಲಿ ಯಾವ ಒಂದು ಹೆಚ್ಚಿನ ಸಂಬಳವನ್ನು ಕೊಟ್ಟಿಲ್ಲ. ಬಹುಶ: ಅವರ ಸಂಖ್ಯೆ ಬಹಳ ಕಡಿಮೆ ಇದ್ದು ಅವರಿಗೆ ಕೊಡಬೇಕಾದ್ದು ೬ ಲಕ್ಷ ರೂಪಾಯಿಗಳು ಇರುತ್ತದೆ. ಅದನ್ನೂ ಕೂಡ ಈಗ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಪಿ. ತಿಪ್ಪಯ್ಯ.—ಸ್ವಾಮಿ ಈಗಾಗಲೇ ಹೈದರಾಬಾದ್ ಸ್ಕೇಲ್‌ನಲ್ಲಿ ಕೊಡಬೇಕೆಂದು ಸುಪ್ರೀಮ್ ಕೋರ್ಟಿನಲ್ಲಿ ತೀರ್ಮಾನವಾಗಿದ್ದು, ಅದರ ಆಧಾರದ ಮೇಲೆ ಹೈದರಾಬಾದ್ ಸ್ಕೇಲನ್ನು ಕೊಡಬೇಕೆಂದು ಹೋರಾಟ ಮಾಡಿದವರ ಪೈಕಿ ನಾನು ಒಬ್ಬನಾಗಿದ್ದೇನೆ, ಬಹುಶಃ ಈ ಒಂದು ಕ್ಷೇಮ ನಿಧಿಗಾಗಿ ಸರ್ಕಾರಿ ಕೆಲಸವನ್ನೇ ಬಟ್ಟು ವಿಧಾನಸಭೆಗೆ ಬಂದಿರತಕ್ಕಂಥ ಸಂದರ್ಭವೂ ಇರುತ್ತದೆ. ಇದರಿಂದ ಶಿಕ್ಷಕರಿಗೆ ಸಂಬಳವೂ ಕಡಿಮೆಯಾಗಿ ಪೆನ್‌ಷನ್ ಕೂಡ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಎರಡನೆಯದಾಗಿ, ಸುಪ್ರೀಮ್ ಕೋರ್ಟಿನಿಂದ ಬಂದಂಥ ಆಜ್ಞೆಯನ್ನು ಹಣಕಾಸಿನ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು ತಡೆಹಿಡಿದುಕೊಂಡಿರತಕ್ಕಂಥ ಪ್ರಶ್ನೆಯೂ ಇರುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ತಡೆಹಿಡಿಯಲಾಗಿದೆ ಎನ್ನುವ ವಿಷಯ ಏನು ಇದೆ ಅದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಾಗಿರುತ್ತದೆ. ಅದಕ್ಕೆ ಕಾಲಾವಕಾಶ ಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ೪೪೦ ಜನಕ್ಕೆ ಮೂರುವರೆ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿರುತ್ತಾರೆ. ಆದರೆ ೧೦ ಸಾವಿರ ಶಿಕ್ಷಕರಿಗೆ ೪ ಕೋಟಿ ರೂಪಾಯಿಗಳು ಎಂದು ಹೇಳುತ್ತಿರುವುದರಿಂದ ಇದು ಅಂಕೆ ಸರಿಯಾಗಿರುವುದಿಲ್ಲ. ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಪಿತರಣೆಯಾಗಬೇಕಾದ್ದು ಇರುತ್ತದೆಂದು ನಮಗೆ ತಿಳಿದು ಬಂದಿರುತ್ತದೆ. ಆದ್ದರಿಂದ ಹತ್ತು ಸಾವಿರ ಜನಕ್ಕೆ ೪ ಕೋಟಿ ಎಂದು ಏನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ ಅದು ಸರಿ ಇದೆಯೇ?

ಶ್ರೀ ಬಿ. ರಾಚಯ್ಯ.—ಅಂಕಿ ಸಂಖ್ಯೆಗಳು ವ್ಯತ್ಯಾಸವಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

೨೧೯. ಶ್ರೀ ಎಸ್.ಆರ್. ಪೋರೆ(ಧಾರವಾಡ).—ಮಾನ್ಯ ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಗಿನಂತೆ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ವರಕವಿ ದಿವಂಗತ ಬೇಂದ್ರೆಯವರ ವಾಸಸ್ಥಳವಾದ ಧಾರವಾಡದ ಕಡಪಾ ಮೈದಾನದಲ್ಲಿ ಅವರ ಪುತ್ಥಳಿಯೊಂದನ್ನು ಸ್ಥಾಪಿಸುವ ಸಲಹೆ ಈಗ ಯಾವ ಹಂತದಲ್ಲಿದೆ ?

ಆ) ಅದನ್ನು ಅತಿ ಶೀಘ್ರವಾಗಿ ಸ್ಥಾಪಿಸಲು ಸರಕಾರದವರು ಕೈಕೊಂಡ ಅಥವಾ ಕೈಕೊಳ್ಳಲು ಉದ್ದೇಶಿಸಿರುವ ತುರ್ತು ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

ಅ) ಹುಬ್ಬಳ್ಳಿ-ಧಾರವಾಡದ ಮಹಾ ನಗರ ಸಭೆಯವರು ಶಿಲ್ಪಿಗಳನ್ನು ನೇಮಿಸಿ ಮುಂಗಡ ಹಣ ನೀಡಿದ್ದಾರೆ.

ಆ) ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಕಾರ್ಯಸಾಧ್ಯತೆಗೆ ಒಳಪಟ್ಟಿದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಧ್ಯಕ್ಷರೇ, ಉತ್ತರವನ್ನು ಸ್ವಲ್ಪ ಬದಲಾವಣೆ ಮಾಡಿದ್ದೇವೆ. ಏತಕ್ಕೆಂದರೆ, ಈ ಒಂದು ವಿಷಯ ನಗರಾಭಿವೃದ್ಧಿ ಮಂಡಲಿಯ ವ್ಯಾಪ್ತಿಗೆ ಬರತಕ್ಕಂಥದ್ದಾಗಿರುತ್ತದೆ. ಇದಕ್ಕೆ ಉತ್ತರ ಹೇಳುವಾಗ ಇಲ್ಲವೆಂದು ಹೇಳಿದ್ದಾರೆ. ಇದನ್ನು ತಿದ್ದುಪಡಿ ಮಾಡಿಕೊಂಡು ಉತ್ತರವನ್ನು ಹೇಳುತ್ತೇನೆ ದಯವಿಟ್ಟು ಕ್ಷಮಿಸಬೇಕು. ಇದಕ್ಕೆ ಉತ್ತರವಾಗಿ ಹುಬ್ಬಳ್ಳಿ ಮತ್ತು ಧಾರವಾಡದ ನಗರಸಭೆಯವರು ಶಿಲ್ಪಿಗಳನ್ನು ನೇಮಿಸಿ ಮುಂಗಡ ಹಣವನ್ನು ನೀಡಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎಸ್.ಆರ್. ಮೋರೆ.—ವರಕವಿ ದಿವಂಗತ ಬೇಂದ್ರೆ ಅವರ ಕೃತಿಗಳನ್ನು ಆಳವಾಗಿ ಅಭ್ಯಸಿಸಲು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಒಂದು ಸಂಶೋಧನಾ ಮಂಡಲಿಯನ್ನು ಪ್ರಾರಂಭ ಮಾಡುವ ಪ್ರಶ್ನೆ ಇದೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಇದುವರೆಗೂ ಅಂತ ಪ್ರಶ್ನೆ ಬಂದಿಲ್ಲ. ಬಂದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಮಂಡಲಿಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುತ್ತದೆ.

ಬಳ್ಳಾರಿ ಜಿಲ್ಲೆ ಶಿಕ್ಷಣ ಇಲಾಖೆ ನೌಕರರ ಪ್ರವಾಸಭತ್ಯೆ ಬಗ್ಗೆ

೨೨೧ ಶ್ರೀ ಚನ್ನಬಸವನಗೌಡ (ಕೂಡಲಗಿ) ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.

ಅ) ಬಳ್ಳಾರಿ ಜಿಲ್ಲೆಯ ಶಿಕ್ಷಣ ಇಲಾಖೆಯ ನೌಕರರ ರಜಾ ಸೌಲಭ್ಯ ಪ್ರವಾಸ ಭತ್ಯೆಯ ಅಂತಿಮ ಬಿಲ್ಲುಗಳು ಇದುವರೆಗೂ ಪಾಸಾಗದಿರುವುದಕ್ಕೆ ಕಾರಣಗಳೇನು,

ಆ) ಎಲ್ಲಾ ಇಲಾಖೆಯವರ ಬಿಲ್ಲುಗಳು ಪಾಸಾಗಿದ್ದು ಈ ಶಿಕ್ಷಣ ಇಲಾಖೆಯವರ ಬಿಲ್ಲುಗಳನ್ನು ತಡೆ ಹಿಡಿಯಲು ಕಾರಣಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಕೆಲವು ನೌಕರರ ರಜೆ ಸೌಲಭ್ಯದ ಪ್ರವಾಸದಲ್ಲಿ ಕೆಲವು ಅಕ್ರಮಗಳು ಕಂಡು ಬಂದಿದ್ದರಿಂದ ಆ ಬಿಲ್ಲುಗಳು ಇದುವರೆಗೂ ಪಾಸಾಗಿರುವುದಿಲ್ಲ.

ಆ) (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಚನ್ನಬಸವನಗೌಡರವರ (ಅ) ಪ್ರಶ್ನೆಯಲ್ಲಿ ಬಳ್ಳಾರಿ ಜಿಲ್ಲೆಯ ಶಿಕ್ಷಣ ಇಲಾಖೆಯ ನೌಕರರ ರಜಾ ಸೌಲಭ್ಯ ಪ್ರವಾಸ ಭತ್ಯೆಯ ಅಂತಿಮ ಬಿಲ್ಲುಗಳು ಇದುವರೆಗೂ ಪಾಸಾಗದಿರುವುದಕ್ಕೆ ಕಾರಣಗಳೇನು ಎಂಬುದಕ್ಕೆ ಉತ್ತರ ಕೆಲವು ನೌಕರರ ರಜೆ ಸೌಲಭ್ಯದ ಪ್ರವಾಸದಲ್ಲಿ ಕೆಲವು ಅಕ್ರಮಗಳು ಕಂಡು ಬಂದಿದ್ದರಿಂದ ಆ ಬಿಲ್ಲುಗಳು ಇದುವರೆಗೂ ಪಾಸಾಗಿರುವುದಿಲ್ಲವೆಂತಲೂ, (ಆ) ಪ್ರಶ್ನೆಯಲ್ಲಿ ಎಲ್ಲಾ ಇಲಾಖೆಯವರ ಬಿಲ್ಲುಗಳು ಪಾಸಾಗಿದ್ದು ಈ ಶಿಕ್ಷಣ ಇಲಾಖೆಯವರ ಬಿಲ್ಲುಗಳನ್ನು ತಡೆಹಿಡಿಯಲು ಕಾರಣಗಳೇನು ಎಂದು ಕೇಳಿರುವುದಕ್ಕೆ ಉತ್ತರವಾಗಿ (ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲವೆಂದೂ ಉತ್ತರಿಸಲಾಗಿದೆ.

ಶ್ರೀ ಚನ್ನಬಸವನಗೌಡ.—ಅಕ್ರಮವೆಂದು ಹೇಳಿದಮೇಲೆ ಇನ್ನೂ ಸರಿಯಾದ ಕ್ರಮವನ್ನು ಏತಕ್ಕೆ ತೆಗೆದುಕೊಂಡಿಲ್ಲವೆಂದು ಕೇಳುತ್ತೇನೆ ?

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಲ್ಲಿ ಇಂತಹ ೧೮೪೧ ಕೇಸ್‌ಗಳು ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಅವು ಪ್ರತಿಯೊಂದನ್ನು ಕೂಡ ಕೂಲಂಕಶವಾಗಿ ಪರಿಶೀಲಿಸಬೇಕಾಗಿರುತ್ತದೆ. ಮತ್ತು ಅವರು ಪ್ರವಾಸ ಕೈಗೊಂಡಿರತಕ್ಕಂಥದ್ದು ಸಮ್ಮ ಸರ್ಕಾರಿ ಪ್ರವಾಸೋದ್ಯಮ ಇಲಾಖೆಯ ಲೈಸೆನ್ಸ್‌ಗೆ ಸಂಬಂಧಪಟ್ಟಿರಂತ್ತದೆಯೇ ಇಲ್ಲವೇ ಎನ್ನುವುದನ್ನೂ ಕೂಡ ಪರಿಶೀಲಿಸಬೇಕಾಗಿದೆ. ಇದನ್ನೆಲ್ಲಾ ಪರಿಶೀಲಿಸಿದ ನಂತರ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ ಮತ್ತೆ ಇದರಲ್ಲಿ ಎಲ್ಲವು ತಪ್ಪಿದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಂಗಮೇಶ್ವರ ಸರ್ವಾರ್.—ಮಾನ್ಯ ಅಧ್ಯಕ್ಷರೇ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಡಿ.ಡಿ.ಪಿ.ಐ.ರವರನ್ನು ಪೋಸ್ಟ್ ಮಾಡಿರುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?